# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ ಟಮಕ, ಕೋಲಾರ-563 103

**Email:** bnuregistrar@karnataka.gov.in Website:www.bnu.karnataka.gov.in


ಸಂಖ್ಯೆ: ಬೆಂ.ಉ.ವಿ/ಅಧಿಸೂಚನೆ/ 1578 /2023-24 ದಿನಾಂಕ: 26.09.2023

## ಅಧಿಸೂಚನೆ

**ವಿಷಯ: 2023-24ನೇ ಸಾಲಿನ ವಿದ್ಯಾರ್ಥಿಗಳ ಕಾಲೇಜು/ ವಿಶ್ವವಿದ್ಯಾಲಯ ಬದಲಾವಣೆ, ಮರು ಪ್ರವೇಶಾತಿ ಹಾಗೂ ಲ್ಯಾಟರಲ್ ಎಂಟ್ರಿಗೆ ಸಂಬಂಧಿಸಿದಂತೆ ಶುಲ್ಕ ಪಾವತಿಸುವ ಬಗ್ಗೆ.**

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 26.09.2023.**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, 2023-24ನೇ ಸಾಲಿನ ಎರಡನೇ ವರ್ಷದ 3ನೇ ಸೆಮಿಸ್ಟರ್ ಹಾಗೂ ಮೂರನೇ ವರ್ಷದ 5ನೇ ಸೆಮಿಸ್ಟರ್‌ಗೆ ವಿದ್ಯಾರ್ಥಿಗಳ ಕಾಲೇಜು/ವಿಶ್ವವಿದ್ಯಾಲಯ ಬದಲಾವಣೆ / ಮರು ಪ್ರವೇಶಾತಿ / ಎರಡನೇ ವರ್ಷದ 3ನೇ ಸೆಮಿಸ್ಟರ್‌ನ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಶುಲ್ಕವನ್ನು ನಿಗಧಿಪಡಿಸಲಾಗಿದೆ.

| ಕ್ರಸಂ | ವಿವರ | ನಿಗಧಿಪಡಿಸಿರುವ ಶುಲ್ಕ (ರೂ.ಗಳಲ್ಲಿ) |
|---|---|---|
| 01 | ಕಾಲೇಜು ಬದಲಾವಣೆ ಶುಲ್ಕ | 1200/- |
| 02 | ವಿಶ್ವವಿದ್ಯಾಲಯ ಬದಲಾವಣೆ ಶುಲ್ಕ | 1500/- |
| 03 | ಮರು ಪ್ರವೇಶಾತಿ ಶುಲ್ಕ | 1200/- |
| 04 | ಲ್ಯಾಟರಲ್ ಎಂಟ್ರಿ ಪ್ರವೇಶ ಶುಲ್ಕ | 1500/- |

ಸಂಬಂಧಪಟ್ಟ ವಿದ್ಯಾರ್ಥಿಗಳು ಮೇಲ್ಕಂಡ ಪಟ್ಟಿಯಲ್ಲಿ ಸೂಚಿಸಿರುವ ಶುಲ್ಕವನ್ನು ವಿಶ್ವವಿದ್ಯಾಲಯದ ಪ್ರವೇಶಾತಿ ಖಾತೆ ಸಂಖ್ಯೆ: 110004686012 IFSC CODE: CNRB0005076 ಗೆ ಪಾವತಿಸುವುದರ ಜೊತೆಗೆ ಅನ್ವಯವಾಗುವ ಈ ಕೆಳಕಂಡ ಷರತ್ತುಗಳು/ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

**ಷರತ್ತುಗಳು/ನಿಬಂಧನೆಗಳು:**

1. ಎರಡನೇ ವರ್ಷದ ಕಾಲೇಜು ಬದಲಾವಣೆ ಪ್ರವೇಶಾತಿಗಾಗಿ 1 ಮತ್ತು 2ನೇ ಸೆಮಿಸ್ಟರ್‌ಗಳ ಫಲಿತಾಂಶ ಹಾಗೂ ಮೂರನೇ ವರ್ಷದ ಕಾಲೇಜು ಬದಲಾವಣೆ ಪ್ರವೇಶಾತಿಗಾಗಿ 3 ಮತ್ತು 4ನೇ ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟಗೊಂಡಿರಬೇಕು. ಜೊತೆಗೆ ಫಲಿತಾಂಶದ ಪ್ರತಿಗಳನ್ನು ಪೂರಕ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

2. ಕಾಲೇಜು ಬದಲಾವಣೆಗೆ ಪ್ರವೇಶವನ್ನು ಬಯಸುವ ಮತ್ತು ವರ್ಗಾವಣೆ ಮಾಡುವ ಎರಡು ಕಾಲೇಜುಗಳಿಂದ ನಿರಪೇಕ್ಷಣಾ ಪ್ರಮಾಣ ಪತ್ರವನ್ನು (NOC) ಪಡೆದು ಮೂಲ NOC ಪ್ರತಿಯನ್ನು ಸಲ್ಲಿಸತಕ್ಕದ್ದು.

3. ಕಾಲೇಜು / ವಿಶ್ವವಿದ್ಯಾಲಯ ಬದಲಾವಣೆ/ ಮರು ಪ್ರವೇಶಾತಿ /ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸಂಬಂಧಿಸಿದಂತೆ ಪಾವತಿಸಿರುವ ಶುಲ್ಕದ ರಶೀದಿಯನ್ನು ಸಲ್ಲಿಸತಕ್ಕದ್ದು.

4. ವಿಶ್ವವಿದ್ಯಾಲಯ ಬದಲಾವಣೆಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕ್ರಮ ಸಂಖ್ಯೆ 1 ರಿಂದ 3 ರವರೆಗೆ ಸೂಚಿಸಿರುವ ದಾಖಲೆಗಳೊಂದಿಗೆ ವಲಸೆ ಪ್ರಮಾಣ ಪತ್ರವನ್ನು (Migration Certificate) ಸಲ್ಲಿಸತಕ್ಕದ್ದು.

5. ವಿದ್ಯಾರ್ಥಿಗಳ ಮರು ಪ್ರವೇಶಾತಿಗೆ ಸಂಬಂಧಪಟ್ಟ ಕಾಲೇಜು ನಿರಪೇಕ್ಷಣಾ ಪ್ರಮಾಣ ಪತ್ರವನ್ನು (NOC) ಸಲ್ಲಿಸತಕ್ಕದ್ದು.

6. ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸಂಬಂಧಿಸಿದಂತೆ ಹಿಂದಿನ ವಿದ್ಯಾಭ್ಯಾಸದ (Previous Education) ಅಂಕಪಟ್ಟಿಗಳನ್ನು ಹಾಗೂ ಸೇರಬಯಸುವ ಕೋರ್ಸಿಗೆ ಸಂಬಂಧಿಸಿದ ಅರ್ಹತೆಯನ್ನು (Eligibility) ಹೊಂದಿರುವುದಾಗಿ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

7. ಪ್ರಸ್ತುತ ಕಾಲೇಜು / ವಿಶ್ವವಿದ್ಯಾಲಯ ಬದಲಾವಣೆ/ ಮರುಪ್ರವೇಶಾತಿ /ಲ್ಯಾಟರಲ್ ಪ್ರವೇಶಾತಿಗೆ ಬಯಸಿರುವ ವಿದ್ಯಾರ್ಥಿಗಳ ಮನವಿಯನ್ನು ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳ ವಿವರಗಳನ್ನು ಪತ್ರದ ಮುಖೇನ **ಕುಲಸಚಿವರು (ಆ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಇವರಿಗೆ ಸಲ್ಲಿಸತಕ್ಕದ್ದು.**

**ವಿ.ಸೂ: ಸದರಿ ಅಧಿಸೂಚನೆಗೆ ಸಂಬಂಧಿಸಿದಂತೆ ಎಲ್ಲಾ ಪತ್ರ ವ್ಯವಹಾರಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರು / ಕಛೇರಿಯಿಂದಲೇ ನಿರ್ವಹಿಸತಕ್ಕದ್ದು.**

**ಆದೇಶದ ಮೇರೆಗೆ**

2/2019

**ಕುಲಸಚಿವರು**

**ಕುಲಸಚಿವರು**
**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**
**ಟಮಕ, ಕೋಲಾರ, ಕರ್ನಾಟಕ-563 103.**

**ಇವರಿಗೆ,**

**ಪ್ರಾಂಶುಪಾಲರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು.**

**ಪ್ರತಿಗಳು.**

1. ಆಪ್ತಶಾಖೆ, ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
2. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
3. ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
4. ಕಛೇರಿ ಪ್ರತಿ.